# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆ: ಅರ್ಜಿ ಆಹ್ವಾನ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ವಿವಿಧ ಕಾರಣಗಳಿಂದಾಗಿ ಖಾಲಿಯಾಗಿರುವ ಅಂಗನವಾಡಿ ಕಾರ್ಯಕರ್ತೆ/ ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಸಕ್ತ ಮಹಿಳೆಯರು https://karnemakaone.kar.nic.in/abcd/ ಮೂಲಕ ಆಗಸ್ಟ್ 12 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಸಂಪರ್ಕಿಸಬಹುದು.

**ಹುದ್ದೆಗಳ ವಿವರ:**

ಅಂಕೋಲಾ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕರ್ತೆ 3, ಅಂಗನವಾಡಿ ಸಹಾಯಕಿ 17, ಭಟ್ಕಳದಲ್ಲಿ ಕಾರ್ಯಕರ್ತೆ 7, ಸಹಾಯಕಿ 15, ಹಳಿಯಾಳದಲ್ಲಿ ಕಾರ್ಯಕರ್ತೆ 12 ಸಹಾಯಕಿ 20, ದಾಂಡೇಲಿಯಲ್ಲಿ ಕಾರ್ಯಕರ್ತೆ 4, ಸಹಾಯಕಿ 12, ಹೊನ್ನಾವಾರದಲ್ಲಿ ಕಾರ್ಯಕರ್ತೆ 4, ಸಹಾಯಕಿ 29, ಜೋಯಿಡಾದಲ್ಲಿ ಸಹಾಯಕಿ 28, ಕಾರವಾರದಲ್ಲಿ ಕಾರ್ಯಕರ್ತೆ 2, ಸಹಾಯಕಿ 6, ಕುಮಟಾದಲ್ಲಿ ಕಾರ್ಯಕರ್ತೆ 3, ಸಹಾಯಕಿ 20, ಮುಂಡಗೋಡದಲ್ಲಿ ಕಾರ್ಯಕರ್ತೆ 10, ಸಹಾಯಕಿ 29 ಸಿದ್ದಾಪುರದಲ್ಲಿ ಕಾರ್ಯಕರ್ತೆ 7, ಸಹಾಯಕಿ 17, ಶಿರಸಿಯಲ್ಲಿ ಕಾರ್ಯಕರ್ತೆ 24, ಸಹಾಯಕಿ 55, ಯಲ್ಲಾಪುರದಲ್ಲಿ ಕಾರ್ಯಕರ್ತೆ 5, ಸಹಾಯಕಿ 15 ಹೀಗೆ ಒಟ್ಟು 81 ಅಂಗನವಾಡಿ ಸಹಾಯಕಿ, 263 ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳಿವೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**Karnataka Help.in**